## ವೇಗ ಅತಿಯಾಯ್ತು

ಝೀ ಕನ್ನಡದಲ್ಲಿ 'ಪ್ರಜಾವಾಣಿ ಸಿನಿ ಸಮ್ಮಾನ್' ಪ್ರಶಸ್ತಿ ಪ್ರಧಾನ ಕಾರ್ಯಕ್ರಮ ಸುಂದರವಾಗಿ ಮೂಡಿಬಂದಿತು. ಸಿನಿಮಾ ತಾರೆಯರ ಸಮ್ಮಿಲನದ ಈ ತಾರೋತ್ಸವವನ್ನು ಅಕುಲ್ ಬಾಲಾಜಿ ಹಾಗೂ ಅನುಶ್ರೀ ಅಚ್ಚುಕಟ್ಟಾಗಿ ನಿರೂಪಿಸಿದರು. ಕಾದು ಕುಳಿತ ನಮ್ಮನ್ನು ಮನರಂಜಿಸಿದ್ದಂತೂ ನಿಜ. ಅತ್ಯುತ್ತಮ ಹಿನ್ನೆಲೆ ಗಾಯಕಿ ಪ್ರಶಸ್ತಿ ಪಡೆದ ಶ್ರುತಿ ಪ್ರಹ್ಲಾದ್ ಅನಿಸಿಕೆ ಮಾತ್ರ ಪ್ರಸಾರವಾಯಿತು. ಪ್ರಶಸ್ತಿ ಬಂದ 'ಕರಟಕ ದಮನಕ' ಚಿತ್ರದ 'ಹಿತ್ತಲಕ ಕರಿಬೇಡ ಮಾವ' ಹಾಡಿನ ಎರಡು ಸಾಲುಗಳನ್ನು ಪ್ರಸಾರ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಕಾರ್ಯಕ್ರಮವನ್ನು ಆತುರ ಆತುರವಾಗಿ ಪ್ರಸಾರ ಮಾಡಿದರು ಎಂದೆನಿಸಿತು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಏಕತಾನತೆಯ ಮಹಾನಟನೆ

ಝೀ ಕನ್ನಡದ 'ಮಹಾನಟಿ' ಏಕತಾನತೆಯಿಂದ ಕೂಡಿದೆ ಎಂದು ಅನ್ನಿಸುತ್ತದೆ. ಸ್ಪರ್ಧಿಗಳಿಗೆ ಸಿನಿಮಾ ದೃಶ್ಯಗಳಿಗೆ ತಮ್ಮ ಅಭಿನಯವನ್ನು ಸೀಮಿತ ಮಾಡಿದಂತೆ ಕಾಣುತ್ತಿದೆ. ಸಿನಿಮಾದ ಆಚೆ ಸಾಮಾಜಿಕ, ರಂಗಭೂಮಿ ಮಾತ್ರವಲ್ಲದೆ ಸಾಧಕಿಯರ ವ್ಯಕ್ತಿತ್ವವನ್ನು ಅಭಿನಯಿಸುವ ಸವಾಲನ್ನು ಹಾಕಬಹುದಿತ್ತು. ಆ ಮೂಲಕ ವೀಕ್ಷಕರಿಗೂ ಬೇರೆ ಬೇರೆ ವಿಷಯಗಳ ಪರಿಚಯ ಮಾಡಿಕೊಟ್ಟಂತೆ ಆಗುತ್ತಿತ್ತು. ಅದು ವೇದಿಕೆಗೂ ಒಂದು ಮೆರುಗು ತುಂಬಬಹುದಿತ್ತು.

—ಭಾರತೀ ಗಂಗಾಧರ್, ಬೆಂಗಳೂರು

## ಆಭಾಸಗಳದ್ದೇ ಹಾರಾಟ

ಧಾರಾವಾಹಿಗಳನ್ನು ನೋಡುತ್ತಿದ್ದರೆ ಆಭಾಸಗಳ ಪಟ್ಟಿ ಇನ್ನಷ್ಟು ಬೆಳೆಯುತ್ತಲೇ ಇದೆ. ಝೀ ಕನ್ನಡದ 'ಲಕ್ಷ್ಮೀ ನಿವಾಸ'ದಲ್ಲಿ ಜಾನು ವಿಶ್ವನ ಮನೆಯಲ್ಲೇ ಆಶ್ರಯ ಪಡೆದು ಅದೆಷ್ಟೋ ದಿನಗಳಾದರೂ ವಿಶ್ವನ ನಿಶ್ಚಿತಾರ್ಥ ಸಮಾರಂಭದ ತನಕವೂ ಅವರಿಬ್ಬರೂ ಮುಖಾಮುಖಿ ಆಗುವುದಿಲ್ಲ.

'ನಾ ನಿನ್ನ ಬಿಡಲಾರೆ'ಯಲ್ಲಿ ದುರ್ಗಾಳಿಗೆ ಕಳೆದಿರುವ ತನ್ನ ಅಕ್ಕನೊಂದಿಗಿನ ಬಾಲ್ಯದ ಆಟಗಳೆಲ್ಲ ನೆನಪಿರುತ್ತದೆ. ಸರ್ವಾಂತರ್ಯಾಮಿಯಾದ ಅಕ್ಕ ಅಂಬಿಕಾಗೆ ಅದ್ಯಾವುದೂ ನೆನಪಿರುವುದಿಲ್ಲ. ಆಕೆಯ ತಂದೆ ಯಾರೆಂದು ತಿಳಿದ ಬಳಿಕ ಎಲ್ಲವೂ ದಿಢೀರೆಂದು ನೆನಪಾಗಿದೆ. 'ಶ್ರಾವಣಿ ಸುಬ್ರಹ್ಮಣ್ಯ'ದಲ್ಲಿ ಸುಬ್ಬುವಿನ ತಾಯಿ ಆತನಿಗೆ ಯಾಮಾರಿಸಿ ಶ್ರಾವಣಿ ಸುಬ್ರಹ್ಮಣ್ಯರ ಮ್ಯಾರೇಜ್ ಸರ್ಟಿಫಿಕೇಟ್ ತಯಾರು ಮಾಡುವುದು, ಇಂತಹ ಆಭಾಸಗಳಿಂದ ಗೊಂದಲ ಮಾಡುವ ಬದಲು ವಾಸ್ತವಕ್ಕೆ ಹತ್ತಿರವಾಗುವಂತೆ ಇದ್ದರೆ ವೀಕ್ಷಕರಿಗೂ ಸರಿಯಾದ ಮಾಹಿತಿ ಸಿಕ್ಕಂತೆ ಆಗುತ್ತದೆ.

—ರಮಣ್ ಶೆಟ್ಟಿ ರೆಂಜಾಳ, ಮುಂಬೈ

ವಾರದ ಪತ್ರ

## ಕೋಡ್ ಕಂಗ್ಲಿಷ್!



ಝೀ ಕನ್ನಡದ 'ಅಣ್ಣಯ್ಯ'ದಲ್ಲಿ ಜಿಮ್ ಸೀನ, ಪಿಂಕಿಯನ್ನು ಪ್ರೀತಿಸಿದ್ದರೂ ಗುಂಡಮ್ಮನನ್ನು ಆಕಸ್ಮಿಕವಾಗಿ ಮದುವೆಯಾಗುತ್ತಾನೆ. ಅವನನ್ನು ಬ್ಲಾಕ್‌ಮೇಲ್ ಮಾಡಲು ಪಿಂಕಿ ಊರ ತುಂಬಾ ಕೋಡ್ ವರ್ಡಿನಲ್ಲಿ ಬರೆಸುತ್ತಾಳೆ. ಹಿಂದೆ 'ಸೀತಾರಾಮ' ಧಾರಾವಾಹಿಯಲ್ಲಿ ಸೀತಮ್ಮನ ಹೆಸರನ್ನು 'c ತಮ್ಮ' ಎಂದು ಬರೆದಿದ್ದರ ಮುಂದುವರಿದ ಭಾಗವೆಂಬಂತೆ ಇಲ್ಲಿ 'c ನ ಲವ್ಸ್ ಪಿಂಕಿ'ಯ ಪ್ರಯೋಗವಾಗಿದೆ. ನುಡಿಯೇನೋ ಬಿಡಿಸಲು ವಿನೋದವಾಗಿದೆ. ಆದರೆ ಈ ನುಡಿಯಿಂದ ಅನಕ್ಷರಸ್ಥರೇ ತುಂಬಿರುವ ಮಾರಿಗುಡಿಯಲ್ಲಿ ನಿರ್ದೇಶಕರು ಯಾವ ಪರಿಣಾಮವನ್ನು ನಿರೀಕ್ಷಿಸುತ್ತಾರೋ ದೇವರೇ ಬಲ್ಲ.

—ವಾ. ಮುರಳೀಧರ, ತೀರ್ಥಹಳ್ಳಿ

## ಕ್ವಾಟ್ಲೆ ಅನಿಸುವ ರುಚಿ




ಕಲರ್ಸ್ ವಾಹಿನಿಯಲ್ಲಿ 'ಕ್ವಾಟ್ಲೆ ಕಿಚನ್' ಕಾರ್ಯಕ್ರಮ ಉತ್ತಮ ಅಭಿರುಚಿಯಿಂದ ಕೂಡಿಲ್ಲ ಎಂದು ಅನ್ನಿಸುತ್ತದೆ. ಕೆಲವೊಮ್ಮೆ ನೋಡಲು ಸಹ ಮುಜುಗರ ಅನ್ನಿಸುತ್ತದೆ. ಕುರಿ ಪ್ರತಾಪ್, ಅನುಪಮಾ ಗೌಡ ವಿನೋದದ ಸಂಭಾಷಣೆಯಿಂದ ಅಡುಗೆ ಮನೆಯಲ್ಲಿ ಇದ್ದವರನ್ನು ವೀಕ್ಷಕರನ್ನು ರಂಜಿಸುತ್ತಾರೆ ಅನ್ನುವುದಕ್ಕಿಂತ ಡಬಲ್ ಮೀನಿಂಗ್‌ನಿಂದ ಕಿರಿಕಿರಿ ಮೂಡಿಸುತ್ತಿದ್ದಾರೆ.

ಅವರು ತಯಾರಿಸುವ ಅಡುಗೆ ಕೂಡ ಅಂತಹ ಆಕರ್ಷಕ ಆಗಿರುವುದಿಲ್ಲ. ಅದೊಂದು ಕಾಲವಿತ್ತು. 'ಎದೆ ತುಂಬಿ ಹಾಡುವೆನು', 'ಡ್ರಾಮಾ ಜೂನಿಯರ್ಸ್', 'ವೀಕ್ ಎಂಡ್ ವಿತ್ ರಮೇಶ್' ಮಾದರಿಯ ಸದಭಿರುಚಿಯ ಕಾರ್ಯಕ್ರಮಗಳು ಇನ್ನೆಲ್ಲಿ?

—ಆರ್. ವೀರೇಶ್ ಕುಮಾರ್, ಬೆಂಗಳೂರು

## ವೈದ್ಯಕೀಯ ಲೋಕಕ್ಕೆ ಸವಾಲು

ಝೀ ಕನ್ನಡದ 'ಅಮೃತಧಾರೆ'ಯನ್ನು ನೋಡುವ ನಾವು ಕಿವಿಯಲ್ಲಿ ಹೂವು ಇಟ್ಟುಕೊಂಡಿದ್ದೇವೆ ಎಂದು ಭಾವಿಸಿದಂತೆ ಆಗಿದೆ. ಅವರು ತೋರಿಸಿದ್ದೆಲ್ಲ ಒಪ್ಪುವ ದಡ್ಡ ವೀಕ್ಷಕರು ಇಲ್ಲ. ಅನೇಕ ಅಡೆತಡೆಗಳನ್ನು ದಾಟಿ ಗೌತಮ್ ತನ್ನ ಪತ್ನಿ ಭೂಮಿಕಾಳನ್ನು ಹೆರಿಗೆ ಆಸ್ಪತ್ರೆಗೆ ದಾಖಲಿಸುತ್ತಾನೆ. ಹೆರಿಗೆಯೂ ಆಗುತ್ತದೆ. ನಂತರ ಮತ್ತೆ ಆಕೆಗೆ ಹೊಟ್ಟೆನೋವು ಕಾಣಿಸಿಕೊಳ್ಳುತ್ತದೆ.

ತಪಾಸಣೆ ಮಾಡಿದ ವೈದ್ಯರು ಇನ್ನೊಂದು ಮಗು ಇದೆ ಎಂದು ಸಿಸೇರಿಯನ್ ಚಿಕಿತ್ಸೆಯ ಮೂಲಕ ಹೆರಿಗೆ ಮಾಡಿಸುತ್ತಾರೆ. ಈಗ ಬೆಳೆದಿರುವ ವೈದ್ಯಕೀಯ ವಿಜ್ಞಾನ ಭ್ರೂಣಾವಸ್ಥೆಯಲ್ಲೇ ಅದನ್ನು ಗುರುತಿಸುತ್ತದೆ. ಮಾತ್ರವಲ್ಲ ಭ್ರೂಣದ ಆರೋಗ್ಯ, ಗಾತ್ರ, ತೂಕ ಸಹಿತ ವಿವರವನ್ನು ನೀಡುತ್ತದೆ. ಹೀಗಿರುವಾಗ ವಿಜ್ಞಾನ ತಂತ್ರಜ್ಞಾನದ ಹೊಸ ಹೊಸ ಆವಿಷ್ಕಾರದ ಪರಿಚಯ ಮಾಡುವುದನ್ನು ಬಿಟ್ಟು ತಪ್ಪು ತಿಳಿವಳಿಕೆಯನ್ನು ನೀಡುವುದು ಸರಿಯಲ್ಲ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ನಗಿಸಿ ಸ್ವಾಮಿ ನಮ್ಮನ್ನು ನಗಿಸಿ

ನಗು ಎಂಬುದು ಮನುಜನ ಆರೋಗ್ಯಯುತ ಬದುಕಿಗೆ ಅಗತ್ಯವಿರುವ ಟಾನಿಕ್. ಇದು ಆಹ್ಲಾದಕರ, ಒತ್ತಡ ನಿವಾರಕ, ಆಯಸ್ಸು ವರ್ಧಕವೂ ಹೌದು. ಹಾಗೆಂದೇ ಹಿರಿಯರು 'ನಕ್ಕರೆ ಅದೇ ಸ್ವರ್ಗ' ಎಂದಿದ್ದಾರೆ. ಕೆಲ ವರ್ಷಗಳ ಹಿಂದೆ ನಮ್ಮ ಕನ್ನಡ ವಾಹಿನಿಗಳಲ್ಲಿ 'ಕ್ರೇಜಿ ಕರ್ನಲ್' 'ತರರಂಪಂ', 'ಹಾಸ್ಯ ಲಾಸ್ಯ' ಕಾರ್ಯಕ್ರಮಗಳು ಬರುತ್ತಿದ್ದವು.

'ಪಾಪ ಪಾಂಡು', 'ಸಿಲ್ಲಿ ಲಲ್ಲಿ' ರೀತಿಯ ಧಾರಾವಾಹಿಗಳು ಬರುತ್ತಿದ್ದವು. ನಿತ್ಯ ಅವುಗಳನ್ನು ವೀಕ್ಷಿಸಿ ಹೊಟ್ಟೆ ಹುಣ್ಣಾಗುವಂತೆ ನಕ್ಕು ಮಲಗಿ ಕಣ್ತುಂಬಾ ನಿದ್ರಿಸುತ್ತಿದ್ದೆವು. ಈಗೇನಾಗಿದೆ? ಬರೀ ಜಗಳ, ಹೊಡೆದಾಟ, ಕೊಲೆ, ಅತ್ಯಾಚಾರ, ಈರ್ಷೆಗಳೇ ತುಂಬಿದ ಧಾರಾವಾಹಿಗಳು! ಇದಕ್ಕೆ ಭೂತಗಳು ಕೂಡ ಆಗಾಗ ಭೇಟಿ ಕೊಡುತ್ತವೆ. ಅವುಗಳನ್ನು ನೋಡಿ ಮಲಗಿ ಬೆಚ್ಚಿ ಎದ್ದೇಳುವ ಕಾಲವೂ ಬಂದಿದೆ.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ